ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 31/2019**

ಚಾ.ಸಾ. **:-2**
ಪ್ರಾ.ಸಾ. **:-3**

| | |
|---|---|
| ಹೆಸರು | : ಕೆ.ರಮೇಶ |
| ತಂದೆಯ ಹೆಸರು | : ಲೇಟ್ ಕೆಂಪೇಗೌಡ |
| ವಯಸ್ಸು | : 56 ವರ್ಷ |
| ಉದ್ಯೋಗ | : ಗುತ್ತಿಗೆದಾರರು |
| ವಾಸಸ್ಥಳ | : ಶ್ರೀರಂಗಪಟ್ಟಣ ಟೌನ್ |

ಪ್ರಮಾಣೀಕರಿಸಲಾದ ದಿನಾಂಕಃ**- 28.07.2026**

<u>ಮುಖ್ಯ ವಿಚಾರಣೆ **:** ಮಾನ್ಯ ಸ.ಸ.ಅ.ರವರಿಂದ **:**</u>

ಮೃತ ಶಾರದ ನಮ್ಮ ಊರಿನವರು. ದಿನಾಂಕಃ 26.03.2019 ಮಧ್ಯಾಹ್ನ ಸುಮಾರು 1.30 ರ ಸಮಯದಲ್ಲಿ ಶ್ರೀರಂಗಪಟ್ಟಣದ ಬಸ್ ಸ್ಟ್ಯಾಂಡ್ ಬಳಿ ಅವರು ರಸ್ತೆ ದಾಟಲು ದ್ವಿಚಕ್ರ ವಾಹನದಲ್ಲಿ ನಿಂತಿದ್ದಾಗ, ಅವರಿಗೆ ಬೆಂಗಳೂರು ಕಡೆಯಿಂದ ಸುಮಾರು 80 ಕಿ.ಮೀ.ವೇಗದಲ್ಲಿ ಬಂದಂತಹ ಕ್ಯಾಂಟರ್ ವಾಹನ ಡಿಕ್ಕಿಪಡಿಸಿರುತ್ತದೆ. ಆ ಸಮಯದಲ್ಲಿ ನಾನು ಮತ್ತು ಚಾ.ಸಾ-3 ರವರು ಸುಮಾರು 25-30 ಅಡಿ ದೂರದಲ್ಲಿ ಇದ್ದೆವು, ತಕ್ಷಣ ನಾವು ಹೋಗಿ ನೋಡಿದ್ದು, ಅವರಿಗೆ ಪ್ರಜ್ಞೆ ಇರಲಿಲ್ಲ, ದೇಹಕ್ಕೆ ಗಾಯಗಳಾಗಿದ್ದವು. ನಾವು ಚಾ.ಸಾ-1 ರವರಿಗೆ ದೂರವಾಣಿ ಕರೆ ಮಾಡಿ ವಿಚಾರ ತಿಳಿಸಿರುತ್ತೇವೆ. ನಂತರ ನಾವು ಅವರನ್ನು ಶ್ರೀರಂಗಪಟ್ಟಣ ಆಸ್ಪತ್ರೆಗೆ ಕಳುಹಿಸಿ, ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸುಮಾರು 3 ದಿನಗಳ ನಂತರ ಅವರು ಮೃತಪಟ್ಟಿರುತ್ತಾರೆ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಪೊಲೀಸರು ಅಪಘಾತಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರ್ ಮಾಡಿರುತ್ತಾರೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು

ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ನನ್ನ ಜೊತೆ ಬೇರೆ ಸಾಕ್ಷಿಗಳು ಸಹ ಹಾಜರಿದ್ದರು. ಸದರಿ ಮಹಜರ್ ನಲ್ಲಿ ಪೊಲೀಸರು ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತಾರೆ.

ರಸ್ತೆ ಅಪಘಾತಕ್ಕೆ ಸಂಬಂಧಿಸಿದಂತೆ ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಾನು ಅಪಘಾತ ಸ್ಥಳದ ಬಳಿ ಮಾಡಿರುತ್ತೇನೆ. ಸದರಿ ದಾಖಲೆಗೆ ಸಹಿ ಮಾಡುವಾಗ ನನ್ನ ಸಮಕ್ಷಮ ಪೊಲೀಸರು ಅಪಘಾತಕ್ಕೆ ಸಂಬಂಧಿಸಿದಂತೆ 2 ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಈಗ ನೋಡುತ್ತಿರುವ ಫೋಟೋಗಳಲ್ಲಿರುವ ಗೂಡ್ಸ್ ವಾಹನ ಮತ್ತು ದ್ವಿಚಕ್ರ ವಾಹನವನ್ನು ಆ ದಿನ ಅಮಾನತ್ತುಪಡಿಸಿಕೊಂಡಿರುತ್ತಾರೆ. ಗೂಡ್ಸ್ ವಾಹನದ 4 ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-4 ಎಂದು ಗುರುತಿಸಲಾಯಿತು. ದ್ವಿಚಕ್ರ ವಾಹನದ 4 ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು.

ಗೂಡ್ಸ್ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ. ಸಾಕ್ಷಿ ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ.

## ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :

ಅಪಘಾತದ ಸಮಯದಲ್ಲಿ ನಾನು ಬಸ್ ಸ್ಟಾಂಡ್ ಬಳಿ ಹಳೆ ಸಂತೆ ಮಾಳದ ರಸ್ತೆಯ ಬಳಿ ಇದ್ದೆ. ಸದರಿ ಸರ್ಕಲ್ ನಲ್ಲಿ ಎರಡೂ ಕಡೆ ಬ್ಯಾರಿಕೇಡ್ ಇರುತ್ತದೆ ಎಂದರೆ ಆ ಸಮಯದಲ್ಲಿ ಇರಲಿಲ್ಲ. ಸದರಿ ಜಾಗದಲ್ಲಿ ಯಾವುದೇ ವಾಹನಗಳು ಬಂದರೂ ನಿಧಾನವಾಗಿ ಬರಬೇಕು ಎಂದರೆ ಸರಿ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸಾಕ್ಷಿ ಅಪಘಾತವಾದ ದಿನ ನೋಡಿರುತ್ತೇನೇ ಎನ್ನುತ್ತಾರೆ. ಅಪಘಾತಪಡಿಸಿದ ವಾಹನ ಗೂಡ್ಸ್ ವಾಹನ ಆಗಿರುತ್ತದೆ, ಅದರ ನೋಂದಣಿ ಸಂಖ್ಯೆ ಗೊತ್ತಿರುವುದಿಲ್ಲ. ಪೊಲೀಸರು ಮಹಜರ್ ಗೆ ಬರಬೇಕೆಂದು ನೋಟೀಸ್ ಕೊಟ್ಟಿಲ್ಲ. ಪೊಲೀಸರಿಗೆ ದೂರು ನೀಡಲು ನಿಮಗೆ ತೊಂದರೆ ಇತ್ತೇ ಎಂದರೆ ಸಾಕ್ಷಿ ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದರಲ್ಲಿ ನಾವು ನಿರತರಾಗಿದ್ದೇವು ಎನ್ನುತ್ತಾರೆ.

ಮೃತರು ಪ್ರಯಾಣ ಮಾಡುತ್ತಿದ್ದ ದ್ವಿಚಕ್ರ ವಾಹನಕ್ಕೆ ವಿಮೆ ಇಲ್ಲದ ಕಾರಣ ಅವರ ಮರಣಕ್ಕೆ ಪರಿಹಾರ ಪಡೆಯಲು, ಆರೋಪಿ ತಪ್ಪಿನಿಂದ ಅಪಘಾತವಾಗದೇ ಇದ್ದರೂ ಆತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮೃತರ ಸಂಬಂಧ ವಿಮೆ ಪರಿಹಾರವನ್ನು ಕುಟುಂಬದವರು ಪಡೆದಿರುತ್ತಾರೆಂದರೆ ಗೊತ್ತಿಲ್ಲ.

ಮೃತರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿಯವರಿಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ, ಹಾಗಾಗಿ ಅವರ ಅಜಾಗರೂಕತೆ ಹಾಗೂ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಮೃತರ ಕುಟುಂಬದವರು ನನಗೆ ಪರಿಚಯವಿರುವ ಕಾರಣ ಅವರಿಗೆ ವಿಮೆ ಪರಿಹಾರ ಕೊಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿಲ್ಲ. ನಾನು ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ :</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**